ದಿ.05.04.2022 ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋದಿಸಲಾಯ್ತು.

**ಪಾಟೀ ಸವಾಲುಃ 5 ಮತ್ತು 6ನೇ ಆರೋಪ ಪರ ಶ್ರೀ ಎಸ್ ಎಸ್ ವಕೀಲರಿಂದಃ**

12. ನಾನು 2013ರಲ್ಲಿ ವಕೀಲನಾಗಿ ನೊಂದಾಯಿಸಿಕೊಂಡಿದ್ದೇನೆ. ನನ್ನ ರೋಲ್ ನಂಬರ್ ಕೆಎಆರ್ ನಂ. 1374-2013. ನನ್ನ ಎನ್‌ರೋಲ್‌ಮೆಂಟ್ ಆಗುವ ಮುಂಚೆ ರಿಯಲ್ ಎಸ್ಟೇಟ್ ಹಾಗೂ ಸಮಾಜಸೇವೆ ಮಾಡುತ್ತಿದ್ದೆನು. ನನಗೆ ಕಲಂ 363, 376 ಐಪಿಸಿ ಆಡಿಯಲ್ಲಿ ಶಿಕ್ಷೆಯಾಗಿದೆ ಎಂದರೆ ನಿಜ ಸದರಿ ತೀರ್ಪಿನ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ನಂ.220-2013 ಚಾಲ್ತಿಯಲ್ಲಿದೆ ಹಾಗೂ ಶಿಕ್ಷೆಯನ್ನು ಅಮಾನತಿನಲ್ಲಿಡಲಾಗಿದೆ, ನಿಮ್ಮ ಮೂಲಕವೇ ಸದರಿ ಪ್ರಕರಣದಲ್ಲಿ ಜಾಮೀನು ಪಡೆದಿದ್ದೇನೆ. ನನ್ನ ಹೆಸರನ್ನು ರೌಡಿ ಶೀಟರ್ ನಲ್ಲಿ ಪಿರ್ಯಾದಿ ಠಾಣೆಯವರು ನೊಂದಾಯಿಸಿದ್ದಾರೆ ಎಂದರೆ ಸರಿ ಸದರಿ ರೌಡಿಶೀಟರ್ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ರಿವಿಷನ್ ಪಿಟಿಷಿನ್ 2963-2019 ದಾಖಲಿಸಿದ್ದೇನೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರೌಡಿಶೀಟರ್ ದಾಖಲೆಯನ್ನು ನಿಖಾಲೆ ಮಾಡಲು 2020ರಲ್ಲಿ ಎಸ್‌ಪಿರವರಿಗೆ ಪರಿಶೀಲಿಸಲು ನಿರ್ದೇಶನ ನೀಡಿದ್ದಾರೆ.

13. ನಾನು ಡಾಲರ್ಸ್ ಕಾಲೋನಿಯಲ್ಲಿ 2010ಕ್ಕಿಂತಲೂ ಮುಂಚೆ ಮೂರು ವರ್ಷಗಳ ಮುಂಚೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. ನಂತರ 2010ರಲ್ಲಿ ಬಾಡಿಗೆ ಮನೆ ಖಾಲಿ ಮಾಡಿ ಊರು ಕಡೆ ಹೋಗಿದ್ದೆನು. ಡಾಲರ್ಸ್ ಕಾಲೋನಿಯ ಬಾಡಿಗೆ ಮನೆ ವಾಂಗಲೀರವರ ಮನೆ, ನಂ.27, 11ನೇ ಕ್ರಾಸ್, 4ನೇ ಮುಖ್ಯರಸ್ತೆ, ಡಾಲರ್ಸ್ ಕಾಲೋನಿ, ಬೆಂಗಳೂರು.

14. 2010ರಲ್ಲಿ ನನಗೆ ವಿವಾಹವಾಗಿರಲಿಲ್ಲ. ಈಗಲೂ ಸಹ ನಾನು ವಿವಾಹವಾಗಿರುವುದಿಲ್ಲ. 2013ರಿಂದ ಬೆಂಗಳೂರಿನ ವಿಜಯನಗರದ ಮೋಹನ್ ಕುಮಾರ್‌ರವರ ಜೊತೆಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ ಕಛೇರಿಯ ನಂಬರ್ ಗೊತ್ತಿಲ್ಲ. ಈಗ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿಲ್ಲ. ಈಗ ನಾನು ಭಾರತೀಯ ಜನತಾ ಪಕ್ಷದಲ್ಲಿ ಕಾನೂನು ಪ್ರಕೋಷ್ಟ ಸಂಚಾಲಕರು(ಲೀಗಲ್ ಅಡ್ವೈಸರ್) ಆಗಿ ಸಹ ಕೆಲಸ ಮಾಡುತ್ತಿದ್ದೇನೆ. ನಾನು ಚಿತ್ರದುರ್ಗದ ಲೋಕಸಭಾಗ ಕ್ಷೇತ್ರದಲ್ಲಿ ಫ್ಯೂಚರ್ ಬಿಜೆಪಿ ಕ್ಯಾಂಡಿಡೇಟ್ ಎಂದು ಆಗಿದ್ದೀರಿ ಎಂದರೆ ನಾನು ದಿಃ26.03.2019ರಲ್ಲಿ ಚಿತ್ರದುರ್ಗ ಬಿಜೆಪಿ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆನು. ನನ್ನ ಅರ್ಜಿಯು ತಿರಸ್ಕರಿಸಲಾಗಿತ್ತು ಸದರಿ ಅರ್ಜಿಯ ಮೇಲೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಅದು ಇನ್ನೂ ರೀಚ್ ಆಗಿರುವುದಿಲ್ಲ.

15. ನಾನು 2000ನೇ ಸಾಲಿನಲ್ಲಿ ಬಿಎ ಪದವಿಯನ್ನು ಬೆಂಗಳೂರಿನ ಜಯನಗರದ ಆರ್‌ಎಂಎಲ್ ಕಾಲೇಜಿನಲ್ಲಿ ಪಡೆದಿದ್ದೇನೆ. ನಾನು ಬಿಎ ಪದವಿ ಮಾಡುವಾಗ ದ್ಯಾವರಹಳ್ಳಿಯಿಂದ ಕಾಲೇಜಿಗೆ ಬಂದು ಹೋಗುತ್ತಿದ್ದೆನು. 2011ರ ಸಾಲಿನಲ್ಲಿ ನಾನು ಎಲ್‌ಎಲ್‌ಬಿ ಪದವಿಗೆ ಪ್ರವೇಶ ಪಡೆದಿದ್ದೆನು. ಆಗಲೂ ಸಹ ನಾನು ದ್ಯಾವರಹಳ್ಳಿಯಿಂದ ಬಂದು ಹೋಗುತ್ತಿದ್ದೆನು. ನಾನು ಪದವಿಯನ್ನು ಹೊಂದುವ ಮುಂಚೆಯೇ ರಿಯಲ್ ಎಸ್ಟೇಟ್ ಹಾಗೂ ಸಮಾಜ ಸೇವೆ ಮಾಡುತ್ತಿದ್ದೆನು. ಸಮಾಜ ಸೇವೆ ಮಾಡಲು ಯಾವುದೇ ಸಂಘಟನೆ ಮಾಡಿಕೊಂಡಿರಲಿಲ್ಲ. ನನ್ನೊಂದಿಗೆ ಸಾಕಷ್ಟು ಜನ ಸಮಾಜ ಸೇವೆ ಮಾಡುವವರು ಇದ್ದರು ಆದರೆ ಈಗ ಇಲ್ಲ. ನಾನು ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಸೇವೆ ಮಾಡುತ್ತಿದ್ದೆನು. ನಾನು 1995ಕ್ಕಿಂತ ಮುಂಚೆ ಪಿಯುಸಿ ನಂತರದಿಂದಲೇ ದಲಿತ ಸಂಘರ್ಷ ಸಮಿತಿಯಲ್ಲಿ ಸದಸ್ಯನಾಗಿದ್ದೆನು. ಆ ಸಮಯದಲ್ಲಿ ಡಿಎಸ್‌ಎಸ್ ನ ತಾಲ್ಲೂಕು ಅಧ್ಯಕ್ಷರು

ಯಾರಾಗಿದ್ದರು ನೆನಪಿಲ್ಲ. ಡಿಎಸ್‌ಎಸ್ ಸಂಘವು ತಾಲ್ಲೂಕು ಕಛೇರಿಯಲ್ಲಿ ನೊಂದು ಆಗಿರುವುದಿಲ್ಲ. ನಾನು ಸ್ವಯಂ ಘೋಷಿತ ಸಂಘದಲ್ಲಿ ಸದಸ್ಯನಾಗಿದ್ದೆನು.

16. ದ್ಯಾವರಹಳ್ಳಿಯಲ್ಲಿ ನಮ್ಮ ಜಾತಿಯ 75ರಿಂದ 80 ಮನೆಗಳು ಇವೆ. 4ರಿಂದ 6, 15ರಿಂದ 19ನೇ ಆರೋಪಿಗಳು ದ್ಯಾವರಹಳ್ಳಿಯವರು ನಮ್ಮ ಜಾತಿಯವರು. ದ್ಯಾವರಹಳ್ಳಿಗೆ ಚಪ್ಪರದಕಲ್ಲು ಕ್ರಾಸ್ ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಮೀಪ ಎಂದರೆ ಸರಿಯಲ್ಲ ಆಗ ದೇವನಹಳ್ಳಿಯಲ್ಲಿಯ ಸರ್ಕಾರಿ ಆಸ್ಪತ್ರೆ ಇತ್ತು. ಚಪ್ಪರದಕಲ್ಲು ಕ್ರಾಸ್‌ಗೆ ವಿಶ್ವನಾಥಪುರ ಪೋಲಿಸ್ ಠಾಣೆ ಸಮೀಪ ಇದೆ. ಚಪ್ಪರದಕಲ್ಲು ಕ್ರಾಸ್‌ನಿಂದ ದೇವನಹಳ್ಳಿಗೆ ಹೋಗುವುದು ರಾಜ್ಯ ರಸ್ತೆ ಎಂದರೆ ಸರಿಯಲ್ಲ ಈಗ ರಾಜ್ಯ ರಸ್ತೆ ಆಗುತ್ತಿದೆ. ಸದರಿ ರಸ್ತೆಯನ್ನು ದಾಬಸ್‌ಪೇಟೆಯಿಂದ ಹಳೇ ಮದ್ರಾಸ್‌ವರೆಗೂ ರಾಜ್ಯ ಹೆದ್ದಾರಿ ಎಂದು ಘೋಷಿಸಲಾಗಿದೆ ಎಂದರೆ ಸರಿ ಆದರೆ ಇನ್ನೂ ರಾಜ್ಯ ಹೆದ್ದಾಗಿ ಆಗುತ್ತಿದೆ. ಚಪ್ಪರದಕಲ್ಲು ಕ್ರಾಸ್‌ನಲ್ಲಿರುವ ವಿಶ್ವನಾಥಪುರ ಪೋಲಿಸ್ ಠಾಣೆಯು 2014ರಲ್ಲಿ ಆಗಿದೆ 2010ರಲ್ಲಿ ಸದರಿ ಠಾಣೆ ವಿಶ್ವನಾಥಪುರದಲ್ಲಿ ಇತ್ತು. ವಿಶ್ವನಾಥಪುರ ಪೋಲಿಸ್ ಠಾಣೆಯು ದೇವನಹಳ್ಳಿಯಿಂದ ದೊಡ್ಡಬಳ್ಳಾಪುರ ರಸ್ತೆಯಲ್ಲಿದೆ. ವಿಶ್ವನಾಥಪುರ ಪೋಲಿಸ್ ಠಾಣೆ ದ್ಯಾವರಹಳ್ಳಿಗೆ ದೇವನಹಳ್ಳಿಗಿಂತಲೂ ಸಮೀಪ ಎಂದರೆ ಸರಿ.

17. 1995 ಸಾಲಿನ ನಂತರ ನನಗೆ ನ್ಯಾಯಾಲಯ-ಕಛೇರಿಗಳ ಬಗ್ಗೆ ಅನುಭವ ಇದೆ ಎಂದರೆ ಸರಿ. 2010ಕ್ಕಿಂತಲೂ ಮುಂಚೆ ಒಟ್ಟು ಕುಟುಂಬದಲ್ಲಿ ಚಾಸಾ-2, ಚಾಸಾ-2ರವರ ಹೆಂಡತಿ, ಗುರಮ್ಮ(ನನ್ನ ಅಕ್ಕ), ನಾನು, ನನ್ನ ತಂದೆ ತಾಯಿ ವಾಸವಾಗಿದ್ದೆವು. 2010ರಲ್ಲಿ ನನ್ನ ತಂದೆ ಚಿಕ್ಕವೆಂಕಟರಾಯಪ್ಪ, ತಾಯಿ ವೆಂಕಟಮ್ಮ ನನ್ನೊಂದಿಗೆ ವಾಸವಿದ್ದರು. ಚಾಸಾ-1 ನಮ್ಮ ಜೊತೆಯಲ್ಲಿರಲಿಲ್ಲ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದರು. ಚಾಸಾ-2ರವರಿಗೆ ಒಬ್ಬನೇ

ಮಗ. 2010ರ ಸಾಲಿನಲ್ಲಿ ಚಿಕ್ಕಮಗು ಮೂರು ವರ್ಷಕ್ಕಿಂತ ಚಿಕ್ಕವನು. ನನ್ನ ತಂದೆ, ತಾಯಿ, ಚಾಸಾ-2, ಆತನ ಪತ್ನಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದರು. ನಮ್ಮ ಜಮೀನು ಘಟನೆ ನಡೆದ ಸ್ಥಳದಿಂದ 30-40 ಅಡಿ ಅಂತರದಲ್ಲಿದೆ. ನಮಗೆ ಬೇರೆ ಹತ್ತಾರು ಜಮೀನುಗಳು ಊರಿನಲ್ಲಿವೆ. ಉಳಿದ ಜಮೀನುಗಳು ಸುಮಾರು ಒಂದು ಕಿಮೀ ಅಂತರದಲ್ಲಿ ಇರಬಹುದು.

18. 2005ರಿಂದ 2011ರವರೆಗೆ ನನ್ನ ಸ್ವಂತ ಸ್ಕಾರ್ಪಿಯೋ ಕಾರ್ ಇತ್ತು, ಸದರಿ ಕಾರ್ ಚಾಸಾ-2ರವರ ಹೆಸರಿನಲ್ಲಿತ್ತು, ಚಾಸಾ-2ರವರಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಚಾಸಾ-2ರವರ ಹೆಸರಿನಲ್ಲಿ ನಾನು ವಾಹನ ಖರೀದಿಸಿದ್ದೆ ಎಂದರೆ ಸರಿ ಒಟ್ಟು ಕುಟುಂಬದಲ್ಲಿದ್ದರಿಂದ ತೆಗೆದುಕೊಂಡಿದ್ದೆನು. ಕಾರನ್ನು ಬ್ಯಾಂಕ್‌ನಲ್ಲಿ ಸಾಲ ಮಾಡಿ ತೆಗೆದುಕೊಂಡಿರುವುದು ನೆನಪಿಲ್ಲ, ಸದರಿ ವಾಹನದ ಆರ್‌ಸಿ ನಂಬರ್ ಹೇಳಲು ಆಗುವುದಿಲ್ಲ, 2011ರಲ್ಲಿ ಸದರಿ ಕಾರನ್ನು ಮಾರಾಟ ಮಾಡಿದ್ದೇನೆ. ಯಾರಿಗೆ ಮಾರಾಟ ಮಾಡಿದ್ದೇನೆ ಎನ್ನುವುದು ನೆನಪಿಲ್ಲ, 2011ರ ನಂತರ ನಾನು ಬೇರೆ ಕಾರನ್ನು ಹೊಂದಿದ್ದೇನೆ. ಈಗಲೂ ಸಹ ನಾನು ಬೆಂಗಳೂರಿನಲ್ಲಿ ವಾಸಮಾಡಿಕೊಂಡಿದ್ದು ಬೆಂಗಳೂರಿನಿಂದ ದ್ಯಾವರಹಳ್ಳಿಗೆ ವಾರಕ್ಕೆ 2-3 ಬಾರಿ ಹೋಗಿ ಬರುತ್ತೇನೆ. ಈಗ ನಾನು ಬೆಂಗಳೂರಿಲ್ಲಿ ಸಹಕಾರ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದೇನೆ. ಈಗ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ್ಲ ವಕೀಲ ವೃತ್ತಿ ಮಾಡುತ್ತೇನೆ. 2013ರ ನಂತರ ಯಾವುದೇ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಬೇರೆಯವರಿಗೆ ಜಮೀನು ಕೊಡಿಸಿರುವುದಿಲ್ಲ ಅಥವಾ ಸಾಕ್ಷಿಯಾಗಿರುವುದಿಲ್ಲ ಎಂದರೆ ನನಗೆ ಜ್ಞಾಪಕ ಇಲ್ಲ, 2013ರಲ್ಲಿ ಯಾವ ಕಛೇರಿಯಲ್ಲಿ ಯಾವ ಕೆಲಸ ನಿರ್ವಹಿಸಿದ್ದೇನೆ ಎಂದು ಜ್ಞಾಪಕ ಇಲ್ಲ ಎಂದರೆ ಘಟನೆಯ ಬಗ್ಗೆ ಜ್ಞಾಪಕ ಇದೆ ಉಳಿದ ಬಗ್ಗೆ ಹೇಳಲು ಆಗುವುದಿಲ್ಲ, 2013, 2015, 2016ನೇ ಸಾಲಿನಲ್ಲಿ ಸಾಕಷ್ಟು ಪ್ರಕರಣಗಳಲ್ಲಿ ಹಾಜರಾಗಿದ್ದೇನೆ ನ್ಯಾಯಾಲಯಗಳ ಹೆಸರು ಹೇಳಲು ಈಗ

ನೆನಪಿಲ್ಲ. 2021ರಲ್ಲಿ ಯಾವ ನ್ಯಾಯಾಲಯದಲ್ಲಿ ಯಾವ ಪ್ರಕರಣಗಳಲ್ಲಿ ಹಾಜರಾಗಿದ್ದೇನೆ ಜ್ಞಾಪಕ ಇಲ್ಲ ಆದರೆ ಎಸಿ ಹಾಗೂ ಡಿಸಿ ನ್ಯಾಯಾಲಯದಲ್ಲಿ ಹಾಜರಾಗಿದ್ದೇನೆ. ಬೆಂಗಳೂರು ನಗರದ ಎಸಿ ಹಾಗೂ ಡಿಸಿ ನ್ಯಾಯಾಲಯಗಳಲ್ಲಿ ಸ್ವಯಂ ಹಾಗೂ ಇತರರ ಪರವಾಗಿ ಎಷ್ಟು ಪ್ರಕರಣಗಳಲ್ಲಿ ಹಾಜರಾಗಿದ್ದೇನೆ ಎಂದರೆ ನೆನಪಿಲ್ಲ. ಅದೇ ರೀತಿ ದೊಡ್ಡಬಳ್ಳಾಪುರದ ಎಸಿ ಹಾಗೂ ಡಿಸಿ ನ್ಯಾಯಾಲಯಗಳಲ್ಲಿ ಸ್ವಯಂ ಹಾಗೂ ಇತರರ ಪರವಾಗಿ ಭಾಗಿಯಾಗಿದ್ದೇನೆ.

19. 2011 ಸಾಲಿನಲ್ಲಿ ಪೋಲಿಸ್ ಠಾಣೆಗೆ ಯಾವ ಪ್ರಕರಣಗಳಲ್ಲಿ ಹಾಜರಾಗಿ ಹೇಗೆ ಪ್ರಕರಣಗಳು ಆರಂಭವಾಗುತ್ತವೆ ಎನ್ನುವುದು ಗೊತ್ತು. 2013ರ ಸಾಲಿನ ಮುಂಚೆ ನನ್ನ ಹತ್ತಿರ ಮೊಬೈಲ್ ಇತ್ತು. 2010ರ ಸಾಲಿನಲ್ಲಿ ನನ್ನ ಬಳಿ ಮೊಬೈಲ್ ಇತ್ತು. ಯಾವುದೇ ಅಹಿತಕರ ಘಟನೆ ಅಥವಾ ವಿಚಾರ ನನಗೆ ತಿಳಿದಾಗ ಮೊಬೈಲ್ ಮೂಲಕ 100 ನಂಬರ್‌ಗೆ ಕಾಲ್ ಮಾಡಿ ಪೋಲಿಸರಿಗೆ ತಿಳಿಸಿದರೆ ತುರ್ತಾಗಿ ಮುಟ್ಟುತ್ತದೆ ಎನ್ನುವುದು ನನಗೆ ಗೊತ್ತಿತ್ತು ಆದರೆ ಘಟನೆ ನಡೆದ ಸಮಯದಲ್ಲಿ ನನಗೆ ಗಾಬರಿಯಲ್ಲಿದ್ದುದರಿಂದ ನಾನು ಪೋಲಿಸರಿಗೆ ಕಾಲ್ ಮಾಡಲು ಆಗಿರಲಿಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಘಟನೆಯ ಬಗ್ಗೆ ತಿಳಿಸಿದ್ದೇನೆ ಆದರೆ ಗಾಬರಿಯಾಗಿದ್ದರಿಂದ ಕಾಲ್ ಮಾಡಿರಲಿಲ್ಲ ಎಂದು ಹೇಳಿರುವುದಿಲ್ಲ.

20. ದಿ:10.02.2010ರಂದು ನಾನು ಬೆಂಗಳೂರಿನಲ್ಲಿ ರಾತ್ರಿ ಹಾಲ್ಟ್ ಮಾಡಿದ್ದೆ ಎಂದರೆ ಸರಿ ಆದರೆ ಆ ದಿನ 04.30ರ ನಂತರ ನಾನು ದ್ಯಾವರಹಳ್ಳಿಯಿಂದ ಬೆಂಗಳೂರಿಗೆ ಬಂದಿದ್ದೆನು. ದಿ:11.02.2010ರಂದು ನಾನು ದ್ಯಾವರಹಳ್ಳಿಗೆ ಬಂದಿರಲಿಲ್ಲ ಬೆಂಗಳೂರಿನಲ್ಲಿಯೇ ಇದ್ದೆನು. ದಿ:10.02.2010ರಂದು 1ನೇ ಆರೋಪಿ ಹಾಗೂ 9ನೇ ಆರೋಪಿ ಹಣ ಕೇಳಲು ಬಂದಿದ್ದು ನಾನು ನನ್ನ ಅಣ್ಣನ ಮೂಲಕ ಕಳುಹಿಸಿಕೊಡುತ್ತೇನೆ ಎಂದು ಹೇಳಿದ್ದೆನು ಎಂದರೆ ಸರಿ.

21. ದಿ:10.02.2010ರಂದು ನಾನು ದ್ಯಾವರಹಳ್ಳಿಗೆ ಎಷ್ಟು ಗಂಟೆಗೆ ಬಂದು ಎಷ್ಟು ಗಂಟೆಗೆ ಬೆಂಗಳೂರಿಗೆ ವಾಪಸ್ಸಾಗಿದ್ದೆ ಎಂಬ ವಿಚಾರವನ್ನು ಪೋಲಿಸರಿಗೆ ಹೇಳಿಕೆ ನೀಡುವಾಗ ಹಾಗೂ ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆ ಸಮಯದಲ್ಲೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿ:10.02.2010ರ ಸಂಜೆ 04.30ರ ನಂತರ ದಿ:12.02.2010ರ ಬೆಳಗಿನ 06.00 ಗಂಟೆಯವರೆಗೆ ನಾನು ಬೆಂಗಳೂರಿನಲ್ಲಿ ಇದ್ದೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಇತ್ತು ಸದರಿ ಮೊಬೈಲ್ ನಂಬರ್ ನೆನಪಿಲ್ಲ. ನನ್ನ ಹೇಳಿಕೆ ನೀಡುವಾಗ ಪೋಲಿಸರು ನನ್ನ ಮೊಬೈಲ್ ನಂಬರ್ ಕೇಳಿರಲಿಲ್ಲ ಅದಕ್ಕೆ ನಾನು ನಂಬರ್ ಕೊಟ್ಟಿರಲಿಲ್ಲ. ದಿ:12.02.2010ರಂದು ಶಿವರಾತ್ರಿ ಹಬ್ಬಕ್ಕೆ ಇದ್ದುದರಿಂದ ನಾನು ದ್ಯಾವರಹಳ್ಳಿಗೆ ಹೋಗುತ್ತಿದ್ದೆ. ಬೆಂಗಳೂರನ್ನು ಬೆಳಗ್ಗೆ 06.30ರಿಂದ 07.00 ರ ಸಮಯದಲ್ಲಿ ಬಿಟ್ಟಿದ್ದೆನು. ಡಾಲರ್ಸ್ ಕಾಲೋನಿಯಿಂದ ದ್ಯಾವರಹಳ್ಳಿಗೆ 20-25ಕಿಮೀ ಅಂತರ ಇದೆ. ಬೆಂಗಳೂರಿಗೆ ದ್ಯಾವರಹಳ್ಳಿಯಿಂದ ಬರಬೇಕಾದರೆ ಹೆಬ್ಬಾಳಿನ ಫ್ಲೈಓವರ್ ಕೆಳಗಡೆ ಯಲಹಂಕ, ಹುಣಸೇಮಾರನಹಳ್ಳಿ, ಐವಿಸಿ ರಸ್ತೆಯ ಮೂಲಕ ಬರಬೇಕು. ಯಲಹಂಕದ ಪೋಲಿಸ್ ಠಾಣೆಯ ಮುಂದೆಯೆ ಹಾಯ್ದು ಹೋಗಬೇಕು ಎಂದರೆ ಸರಿ. ಆ ಸಮಯದಲ್ಲಿ ನನ್ನ ಕಾರಿಗೆ ಡ್ರೈವರ್ ಇರಲಿಲ್ಲ. ಬೆಳಗ್ಗೆ 07.00 ಗಂಟೆ ಸಮಯದಲ್ಲಿ ಬೆಂಗಳೂರು ಬಿಟ್ಟು ನಮ್ಮ ಊರಿಗೆ ತಲುಪುವವರೆಗೂ ಯಾವುದೇ ಗಲಾಟೆ ಇರಲಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆಗುತ್ತಿದ್ದ ಬಗ್ಗೆ ನನಗೆ ನಾನು ಊರು ತಲುಪುವವರೆಗೂ ಗಲಾಟೆ ಕುರಿತು ಮೊಬೈಲ್ ಕರೆಗಳು ಬಂದಿರಲಿಲ್ಲ. ಗಲಾಟೆ ಸಮಯದಲ್ಲಿ ನನ್ನ ತಂದೆ, ತಾಯಿ, ಚಾಸಾ-2 ಆತನ ಹೆಂಡತಿ ಹಾಗೂ ಸಹೋದರಿ ಗುರಮ್ಮರವರ ಹತ್ತಿರ ಮೊಬೈಲ್‌ಗಳು ಇರಲಿಲ್ಲ. ಚಾಸಾ-1, ಚಾಸಾ-3 ಮತ್ತು ಚಾಸಾ-10ರವರ ಬಳಿ ಮೊಬೈಲ್ ಇದ್ದ ಬಗ್ಗೆ ಜ್ಞಾಪಕ ಇಲ್ಲ. ಊರಿನಲ್ಲಿ ಯಾವುದಾದರೂ ವಿಷಯ ತಿಳಿಸಬೇಕಾದರೆ ಚಾಸಾ-2ರವರು ನನ್ನ ಹತ್ತಿರ ಬೆಂಗಳೂರಿಗೆ ಬಂದೇ ಮಾಹಿತಿ ಹೇಳಬೇಕು ಎಂದರೆ ಊರಿನಲ್ಲಿ ಟೆಲಿಫೋನ್

ಬೂತ್ ಇದ್ದವು ಅದರ ಮೂಲಕ ತಿಳಿಸುತ್ತಿದ್ದರು. ಸದರಿ ಟೆಲಿಫೋನ್ ಬೂತ್ತು ಯಾರ ಮಾಲೀಕತ್ವದ್ದು ಎಂದು ಹೇಳಲು ಜ್ಞಾಪಕ ಇಲ್ಲ. ದಿ:12.02.2010ರ ಮುಂಚಿತವಾಗಿ ನನಗೆ ಬೇರೆ ಏನಾದರೂ ತುರ್ತು ಮಾಹಿತಿ ತಿಳಿಸಬೇಕಾದರೆ ಸದರಿ ಟೆಲಿಫೋನ್ ಬೂತ್ ಮುಖಾಂತರ ನನಗೆ ತಿಳಿಸುತ್ತಿದ್ದರು ಎಂದರೆ ಸರಿ.

22. ದಿ:12.02.2010ರಂದು ನೇರವಾಗಿ ನಾನು ಬೆಳಗ್ಗೆ 07.30ರ ಸಮಯಕ್ಕೆ ನಮ್ಮ ಮನೆಗೆ ಹೋದೆನು ಅಂದರೆ ನನ್ನ ತಂದೆಯ ಮನೆಗೆ ಹೋಗಿದ್ದೆನು. ಆ ಸಮಯದಲ್ಲಿ ನನ್ನ ತಂದೆ, ತಾಯಿ, ಚಾಸಾ-2 ಹಾಗೂ ಅವರ ಪತ್ನಿ ಮನೆಯಲ್ಲಿದ್ದರು ಎಂದರೆ ಸರಿ ಗಂಗಪ್ಪ ಸಹ ಮನೆಯಲ್ಲಿದ್ದರು. ಘಟನೆ ನಡೆದ ಅವಧಿಯಲ್ಲಿ ಅವರೆಲ್ಲರೂ ಮನೆಯಲ್ಲಿದ್ದರು. ನನ್ನ ತಂದೆ 2014ರ ಸಾಲಿನಲ್ಲಿ ಮೃತರಾಗಿರುತ್ತಾರೆ. ನನ್ನ ತಾಯಿ 2017ರಲ್ಲಿ ಮೃತರಾಗಿರುತ್ತಾರೆ. ನನ್ನ ಅಕ್ಕ ಮತ್ತು ಭಾವ ಗಂಗಪ್ಪ ಇದ್ದರು. ನಾನು ದ್ಯಾವರಹಳ್ಳಿಯ ನಮ್ಮ ಮನೆಗೆ ಹೋದಾಗ ಬೆಳಗ್ಗೆ 07.30ರಿಂದ 08.00 ಗಂಟೆ ಸಮಯದಲ್ಲಿ ನಮ್ಮ ಮನೆಯಲ್ಲಿಯೇ ಇದ್ದೆನು. ನನ್ನ ತಾಯಿ ನನಗೆ ಟೀ ತಿಂಡಿ ಮಾಡಿಕೊಟ್ಟಿದ್ದರು. ಯಾವ ತಿಂಡಿ ಸೇವಿಸಿದ್ದೆನೋ ಜ್ಞಾಪಕ ಇಲ್ಲ, ನಾನು ತಿಂಡಿ ತಿನ್ನುವಾಗ ನನ್ನೊಂದಿಗೆ ನನ್ನ ತಂದೆ, ತಾಯಿ, ನನ್ನ ಅಕ್ಕ ಹಾಗೂ ಭಾವ, ನನ್ನ ಅಣ್ಣ ಹಾಗೂ ನನ್ನ ಅತ್ತಿಗೆ ತಿಂಡಿ ತಿಂದರು. ತಿಂಡಿ ತಿಂದ ನಂತರ ಕಾಫಿಯನ್ನು ಸೇವಿಸಿದ್ದೆವು. ಎಲ್ಲರೂ ಸೇರಿ ಮನೆಯಲ್ಲಿ ಬೇರೆ ವಿಚಾರಗಳ ಬಗ್ಗೆ ಮಾತನಾಡಿದ್ದೆವು. 10ನೇ ತಾರೀಖು ಕೇಬಲ್ ಕುಮಾರ ತಿಮ್ಮಯ್ಯ ಬಂದಿದ್ದು ಆತನಿಗೆ ನನ್ನ ಅಣ್ಣನ ಮೂಲಕ ಹಣ ಕೊಟ್ಟು ಕಳುಹಿಸಿಸುವುದಾಗಿ ಹೇಳಿದ್ದೆನು. 12ನೇ ತಾರೀಖಿನಂದು ಸಹ ಕೇಬಲ್ ಕುಮಾರ ಹಾಗೂ ತಿಮ್ಮಯ್ಯ ಬಂದಿದ್ದರು ಈ ದಿನ ಬ್ಯಾಂಕ್ ರಜೆ ಇದೆ ಹಣ ತಯಾರು ಮಾಡಲು ಆಗಲಿಲ್ಲ ಎಂದು ಹೇಳಿದ್ದೆನು.

23. ಬೆಳಗ್ಗೆ 09.30ರಿಂದ 10.00 ಗಂಟೆ ಸಮಯದಲ್ಲಿ ನಾನು ಗಾಯಾಳುಗಳ ಜೊತೆ ದ್ಯಾವರಹಳ್ಳಿಯಿಂದ ಆಸ್ಪತ್ರೆಗೆ ಹೋಗಿದ್ದೆನು. ಗಾಯಗಳುಗಳನ್ನು ದೇವನಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ 11.00ರಿಂದ 11.30 ಆಗಿರಬಹುದು. ದ್ಯಾವರಹಳ್ಳಿಯಿಂದ ದೇವನಹಳ್ಳಿ 15ಕಿಮೀ ಅಂತರ ಇರಬಹುದು. ನಮ್ಮೂರಿನಿಂದ ದೇವನಹಳ್ಳಿಗೆ 9ಕಿಮೀ ಅಂತರ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾನು ಐವಿಸಿ ರಸ್ತೆಯಿಂದ ಹೋಗಿದ್ದೆನು. ಪೋಲಿಸರನ್ನು ಕಂಡ ತಕ್ಷಣ ಘಟನೆಯ ವಿಷಯವನ್ನು ತಿಳಿಸಬೇಕು ಎಂಬ ಆಸಕ್ತಿ ಇತ್ತು. ದೇವನಹಳ್ಳಿಯ ಆಸ್ಪತ್ರೆ, ದೇವನಹಳ್ಳಿ-ವಿಜಯಪುರ ರಸ್ತೆಯಲ್ಲಿದೆ. ನಮ್ಮೂರಿನಿಂದ ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಾದರೆ ದೇವನಹಳ್ಳಿಯ ಮೂಲಕ ಹೋಗಬೇಕು ಎಂದರೆ ಸರಿ. ದೇವನಹಳ್ಳಿಯ ಬಸ್ ನಿಲ್ದಾಣದ ಹತ್ತಿರ ಪೋಲಿಸ್ ಠಾಣೆ ಇದೆ. ಸದರಿ ದಿನವೂ ಕಾರನ್ನು ನಾನೇ ಚಲಾವಣೆ ಮಾಡಿಕೊಂಡು ಬಂದಿದ್ದೆನು. ಒಟ್ಟು ಆರು ಜನ ಗಾಯಗಳುಗಳನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದೆನು. ಆ ದಿನ ಗಾಯಗಳುಗಳನ್ನು ಆಸ್ಪತ್ರೆಗೆ ದಾಖಲು ಮಾಡುವವರೆಗೂ ಗಾಯಾಳುಗಳ ರಕ್ತ ಸೋರುತ್ತಿತ್ತು, ಆ ದಿನ ದೇವನಹಳ್ಳಿ ಆಸ್ಪತ್ರೆಯಲ್ಲಿ ಮಧ್ಯಾಹ್ನ 02.00ರಿಂದ 02.30ರವರೆಗೆ ಇದ್ದೆನು. ಚಾಸಾ-1ರಿಂದ 3 ಹಾಗೂ ಮೂವರು ಮೃತರನ್ನು ಹೇಗಾದರೂ ಮಾಡಿ ತುರ್ತಾಗಿ ಚಿಕಿತ್ಸೆ ಕೊಡಿಸಬೇಕು ಎಂದು ತುಂಬಾ ಇಚ್ಛೆ ಇತ್ತು ಎಂದರೆ ಸರಿ. ದೊಡ್ಡಬಳ್ಳಾಪುರದಲ್ಲಿ ದೊಡ್ಡ ಆಸ್ಪತ್ರೆ ಇದೆ. ದೊಡ್ಡಬಳ್ಳಾಪುರದ ಆಸ್ಪತ್ರೆ ದೇವನಹಳ್ಳಿ ಆಸ್ಪತ್ರೆ ನಮ್ಮ ಊರಿಗೆ ಹತ್ತಿರದಲ್ಲಿ ಇದೆ ಎಂದರೆ ಸರಿ. ಗಾಯಗಳುಗಳನ್ನು ಹಾಗೂ ಮೃತರನ್ನು ಊರಿನ ಸಮೀಪದಲ್ಲಿರುವ ದೊಡ್ಡಬಳ್ಳಾಪುರದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ ಸದರಿ ರಸ್ತೆಯಲ್ಲಿ ರಸ್ತೆ ತೊಂದರೆ ಇದ್ದುದರಿಂದ ಐವಿಸಿ ರಸ್ತೆಯ ಮೂಲಕ ಹೋಗಿದ್ದರಿಂದ ದೇವನಹಳ್ಳಿಗೆ ಹೋಗಿದ್ದೆವು. ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬೇರೆ ವಾಹನಗಳು ಓಡಾಡುತ್ತಿದ್ದವು ಎಂದರೆ ಜ್ಞಾಪಕ ಇಲ್ಲ ನಮ್ಮ ಊರಿನಿಂದ ಹೋಗಲು ಅಡಚಣೆ ಇತ್ತು.

24. ನಾನು ಮಧ್ಯಾಹ್ನ 02.30ರವರೆಗೂ ದೇವನಹಳ್ಳಿ ಆಸ್ಪತ್ರೆಯಲ್ಲಿ ಇದ್ದಾಗ ಚಾಸಾ-1ರವರನ್ನು ನಾನೇ ಆಸ್ಪತ್ರೆಗೆ ದಾಖಲೆ ಮಾಡಿದ್ದೇನೆ. ಆಗ ಚಾಸಾ-1ರಿಂದ 3ರವರು ಮಾತನಾಡುವ ಸ್ಥಿತಿಯಲ್ಲಿದ್ದರು. ಚಾಸಾ-2 ಸಹ ಮಾತನಾಡುವ ಸ್ಥಿತಿಯಲ್ಲಿದ್ದರು ಆದರೆ ನೋವಿನಲ್ಲಿದ್ದರು. ಆರು ಜನರನ್ನು ನಾನೇ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದೇನೆ.

25. ಮೃತ ಮೂವರಲ್ಲಿ ಮೊದಲು ಯಾರನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದೆನೋ ನನಗೆ ಈಗ ನೆನಪಿಲ್ಲ ಎಲ್ಲರು ಒಟ್ಟಿಗೆ ಹೋಗಿದ್ದೆವು. ಮೃತರು ಆಸ್ಪತ್ರೆಗೆ ದಾಖಲಾಗುವ ಸಮಯದಲ್ಲಿ ಅಷ್ಟು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮೂವರು ಮೃತರಿಗೆ ಗಾಯಗಳು ಎಲ್ಲಿ ಹೇಗೆ ಆಗಿದ್ದು ಯಾರು ಮಾಡಿದ್ದು ಎಂದು ವೈದ್ಯರು ನನಗೆ ಕೇಳಿದ್ದರು. ನಾನು ವೈದ್ಯರಿಗೆ ಮೃತರಿಗೆ ಹಲ್ಲೆ ಮಾಡಿದವರ ಹೆಸರು ಯಾವ ಆಯುಧದಿಂದ ಹಲ್ಲೆ ಮಾಡಿದ್ದರು ಎನ್ನುವ ವಿಚಾರವನ್ನು ಹೇಳಿದ್ದೆನು. ನಾನು ಹೇಳಿದ್ದನ್ನು ವೈದ್ಯರು ಬರೆದುಕೊಂಡಿದ್ದರು. ವೈದ್ಯರು ನನ್ನ ಸಹಿ ಪಡೆದಿದ್ದರು. ಚಾಸಾ-1ರಿಂದ 3ರವರಿಗೆ ವೈದ್ಯರು ಹಲ್ಲೆ ಮಾಡಿದವರ ಹೆಸರು ಯಾವ ಆಯುಧದಿಂದ ಹಲ್ಲೆ ಮಾಡಿದ್ದರು ಎನ್ನುವ ವಿಚಾರವನ್ನು ಕೇಳಿದ್ದರು. ಅವರು ವೈದ್ಯರಿಗೆ ಹಲ್ಲೆ ಮಾಡಿದವರ ಹೆಸರು ಯಾವ ಆಯುಧದಿಂದ ಹಲ್ಲೆ ಮಾಡಿದ್ದರು ಎನ್ನುವ ವಿಚಾರವನ್ನು ಹೇಳಿದ್ದರು. ವೈದ್ಯರು ಬರೆದುಕೊಂಡು ಚಾಸಾ-1ರಿಂದ 3ರವರ ಸಹಿ ಪಡೆದಿದ್ದರು. ನಾನು ಸದರಿಯವರ ದಾಖಲಾತಿ ಮಾಡಿದ್ದರಿಂದ ನನ್ನ ಸಹಿಯನ್ನು ಪಡೆದಿದ್ದರು. ನಾನು ಆಸ್ಪತ್ರೆಯಲ್ಲಿ ಮಧ್ಯಾಹ್ನ 02.30ರವರೆಗೆ ಇದ್ದ ಸಮಯದಲ್ಲಿ ವಿಶ್ವನಾಥಪೋಲಿಸ್ ಠಾಣೆಯ ಪಿಎಸ್ಐ, ಪಿಐ, ಎಸ್‌ಪಿ, ಡಿವೈಎಸ್‌ಪಿರವರು ಬಂದಿದ್ದರು ಚಾಸಾ-1ರಿಂದ 3 ಹಾಗೂ ಮೃತರು ದಾಖಲಾದ ತಕ್ಷಣ ಬಂದಿದ್ದರು. ಪೋಲಿಸರು ಆಸ್ಪತ್ರೆಗೆ ಬಂದಾಗ ನನ್ನನ್ನು ಗಾಯಾಳುಗಳಿಗೆ ಯಾವ ರೀತಿಯ ಸಂಬಂಧ ಎಂದು ವಿಚಾರಿಸಿದ್ದರು. ನಾನು ಸದರಿ ಬಗ್ಗೆ ಹೇಳಿದ್ದೆನು ಚಾಸಾ-1ರವರು ಸಹ ಹೇಳಿದ್ದರು. ಘಟನೆಯ ಬಗ್ಗೆ ಕೂಲಂಕುಷವಾಗಿ ನನ್ನನ್ನು ವಿಚಾರಿಸಿದಾಗ ಹಲ್ಲೆ ಮಾಡಿದವರ

ಹೆಸರು, ಆಯುಧ, ಗಾಯದ ವಿವರಗಳನ್ನು ಹೇಳಿದ್ದೆನು. ನಾನು ಹೇಳಿರುವುದನ್ನು ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರು ಬರೆದುಕೊಂಡರು. ನಾನು ಅದಕ್ಕೆ ಸಹಿ ಮಾಡಿರುವುದಿಲ್ಲ, ಪೋಲಿಸರು ನಾನು ಹೇಳಿದ್ದ ವಿಚಾರಗಳಿಗೆ ನನ್ನ ಸಹಿ ಅವಶ್ಯಕತೆ ಇಲ್ಲ ಎಂದು ಹೇಳಿದ್ದರು.

26. ಮಧ್ಯಾಹ್ನ 02.30 ಗಂಟೆಗೆ ದೇವನಹಳ್ಳಿ ಆಸ್ಪತ್ರೆ ಬಿಟ್ಟ ನಂತರ ಅದೇ ದಿನ ದೇವನಹಳ್ಳಿ ಆಸ್ಪತ್ರೆಗೆ ಮತ್ತೆ ವಾಪಸ್ಸು ಬಂದಿರಲಿಲ್ಲ. ದಿ:13.02.2010ರಂದು ನಾನು ದೇವನಹಳ್ಳಿ ಆಸ್ಪತ್ರೆಗೆ ಹೋಗಿರಲಿಲ್ಲ. ದಿ: 14.02.2010ರಂದು, 15.02.2010, 16.02.2010ರಂದು ಸಹ ನಾನು ದೇವನಹಳ್ಳಿ ಆಸ್ಪತ್ರೆಗೆ ಹೋಗಿರಲಿಲ್ಲ. ಈ ಘಟನೆಯ ವಿಚಾರದಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಿದ ನಂತರ 16.02.2010ರ ನಂತರ ದೇವನಹಳ್ಳಿ ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಗಾಯದ ಪ್ರಮಾಣ ಪತ್ರ ತರಲು ಹೋಗಿದ್ದೆನು. ಚಾಸಾ-1ರಿಂದ 3 ಹಾಗೂ ಮೂವರು ಮೃತರ ಆಸ್ಪತ್ರೆಯ ದಾಖಲಾತಿಗಳನ್ನು ನಾನೇ ಆಸ್ಪತ್ರೆಗೆ ಹೋಗಿ ಪಡೆದಿದ್ದೆನು. ಸದರಿ ದಾಖಲೆಗಳನ್ನು ನಾನೇ ಡಿವೈಎಸ್‌ಪಿರವರಿಗೆ ನೀಡಿದ್ದೇನೆ. ಆಸ್ಪತ್ರೆಯ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿಕೊಂಡು ಡಿವೈಎಸ್‌ಪಿರವರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕೋಶ ಕೋರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.